ಯುವವೇದಿಕೆ

# ಪಂಚ ಶ್ರೇಷ್ಠ ಪಾಠಗಳು

(ಸಂಗ್ರಹಕಾರರು : ರಾಧಾಕೃಷ್ಣ, ಅಮೆರಿಕ)

ನಾವು ಕುಟುಂಬದಲ್ಲಿ, ಕಾರ್ಯಕ್ಷೇತ್ರಗಳಲ್ಲಿ, ವಿವಿಧ ಸಂಸ್ಥೆಗಳಲ್ಲಿ ಎಲ್ಲೆಲ್ಲಿಯೂ ಸಹಮಾನವರೊಡನೆ ಸಂಪರ್ಕವನ್ನು ಹೊಂದಿರುತ್ತೇವೆ. ನಾವು ಅವರೊಡನೆ ವಿವಿಧ ಬಗೆಯ ಸಂಬಂಧಗಳನ್ನು ಬೆಳಸಿಕೊಳ್ಳಬೇಕಾಗುತ್ತದೆ. ವಿಶೇಷವಾಗಿ ಇಂದಿನ ಸಾಮಾಜಿಕ ಸಂದರ್ಭದಲ್ಲಿ ಪರಸ್ಪರ ಮಾನವ ಸಂಬಂಧ ಅತ್ಯಂತ ಅನಿವಾರ್ಯವಾದ ವಿಷಯವಾಗಿದೆ. ನಾವು ಭೌತಿಕವಾಗಿ ಮಾತ್ರವಲ್ಲ, ಮಾನಸಿಕವಾಗಿಯೂ ಭಾವನಾತ್ಮಕವಾಗಿಯೂ ಇತರರನ್ನು ಅವಲಂಬಿಸಬೇಕಾಗುತ್ತದೆ. ಯಾವ ವ್ಯಕ್ತಿಯೂ ತಾನು ಸಂಪೂರ್ಣವಾಗಿ ಇತರರಿಂದ ಬೇರೆಯಾಗಿ ಇರಲಾರ, ತನ್ನದೇ ಒಂದು ಪ್ರಪಂಚದಲ್ಲಿ ವಾಸಿಸಲಾರ. ಆತನು ತಾನಲ್ಲದೆ ಇತರರ ಇರುವಿಕೆಯನ್ನೂ ಅವರ ಭೌತಿಕ ಮತ್ತು ಮಾನಸಿಕ ಆವಶ್ಯಕತೆಗಳನ್ನೂ ಪರಿಗಣಿಸಲೇಬೇಕಾಗುತ್ತದೆ. ತನ್ನ ಆವಶ್ಯಕತೆಯಂತೆಯೇ ಇತರರ ಆವಶ್ಯಕತೆಯೂ ಇರುತ್ತದೆ ಎಂಬ ಪ್ರೌಢ ಮನೋಭಾವವನ್ನು ಬೆಳಸಿಕೊಂಡು, ಅದಕ್ಕನುಗುಣವಾಗಿ ತನ್ನ ಮಾತು, ಕೃತಿ ಆಲೋಚನೆಗಳನ್ನು ರೂಪಿಸಿಕೊಳ್ಳುವುದು ಪ್ರತಿಯೊಬ್ಬರ ಮಾನಸಿಕ ಆರೋಗ್ಯಕ್ಕೆ ಮತ್ತು ನೆಮ್ಮದಿಯ ಜೀವನಕ್ಕೆ ಅತ್ಯಂತ ಆವಶ್ಯಕ.

ಇಂದಿನ ಈ ವಾಣಿಜ್ಯ ಯುಗದಲ್ಲಿ, ಧನಪ್ರಧಾನ ಜೀವನ ಹೋರಾಟದಲ್ಲಿ ನಾವು ಮಾನವರಾಗಿ ಜೀವನವನ್ನು ನಡೆಸುವುದು ಹೇಗೆ ಎಂಬುದನ್ನು ಕಲಿಯುವುದು ಅತ್ಯಂತ ತುರ್ತುಸಂಗತಿಯಾಗಿದೆ. ಸಹಮಾನವರೊಡನೆ ಭೌತಿಕ ಲಾಭವನ್ನು ಮೀರಿದ, ಇತರರ ಭಾವಕ್ಕೆ ಸ್ಪಂದಿಸುವ, ತನ್ನ ಉದಾತ್ತ ಸ್ವಭಾವಕ್ಕೆ ಅನುರೂಪವಾದ, ಇತರರ ಉದಾತ್ತ ಸ್ವಭಾವವನ್ನು ಸ್ಪರ್ಶಿಸಿ ಪ್ರಚೋದಿಸುವ ಮತ್ತು ವೈಯಕ್ತಿಕ ಸೀಮಿತ ವಲಯದಿಂದ ಹೊರಬಂದು ತನ್ನ ಸುಖ ದುಃಖಗಳನ್ನು ಇತರರಲ್ಲೂ ಇತರರದನ್ನು ತನ್ನಲ್ಲೂ ಕಾಣುವ ಮನೋಭಾವವನ್ನು ಅವಲಂಬಿಸಿದ ಸಂಬಂಧವನ್ನು ಬೆಳಸಿಕೊಳ್ಳುವುದು ಅತ್ಯವಶ್ಯವಾಗಿದೆ. ಈ ಕೆಳಗಿನ ಋಗ್ವೇದ ಮಂತ್ರಕ್ಕೆ ಅನುಗುಣವಾಗಿ ನಮ್ಮ ಜೀವನವನ್ನು ರೂಪಿಸಿಕೊಳ್ಳುವುದು ಬಹುಮುಖ್ಯವಾಗಿದೆ :

**ಸಮಾನೀ ವ ಆಕೂತಿಸ್ಸಮಾನಾ ಹೃದಯಾನಿ ವಃ |**
**ಸಮಾನಮಸ್ತು ವೋ ಮನೋ ಯಥಾ ವಸ್ಸುಸಹಾಸತಿ ||**

"ನಮ್ಮ ಆಸೆಗಳು ಸಮಾನವಾಗಿರಲಿ, ನಮ್ಮ ಹೃದಯಗಳು ಒಂದುಗೂಡಿರಲಿ, ನಮ್ಮ ಉದ್ದೇಶಗಳಲ್ಲೂ ಐಕ್ಯತೆ ಇರಲಿ ಮತ್ತು ನಮ್ಮ ಪರಸ್ಪರ ಸಂಬಂಧ ಪರಿಪೂರ್ಣವಾಗಿರಲಿ."

ಈಗಿನ ಜಾಗತಿಕ ಸಂದರ್ಭದಲ್ಲಿ ನಮಗಿರುವ ಪರ್ಯಾಯಗಳು ಎರಡೆ: ಒಂದಾ ಒಟ್ಟಿಗೆ ಬಾಳುವುದು ಇಲ್ಲವೇ ಒಟ್ಟಿಗೆ ಮಡಿಯುವುದು. ಇಂದು ವಿನಾಶಕರ ಪರಿಸ್ಥಿತಿ ಎಲ್ಲೆಲ್ಲೂ ಕಂಡುಬರುತ್ತಿದೆ. ಪರಮಾಣು ಯುದ್ಧಕ್ಕಿಂತ ಮಿಗಿಲಾಗಿ ಎಲ್ಲೆಲ್ಲಿಯೂ ಕಂಡುಬರುತ್ತಿರುವ ಮಾನವೀಯ ಕಾಳಜಿಯ ಕೊರತೆ ನಮ್ಮಲ್ಲಿ ವಿನಾಶದ ಭೀತಿಯನ್ನು ಹೆಚ್ಚಿಸುತ್ತಿದೆ. ಈ ಭೀತಿಯನ್ನು ಹೋಗಲಾಡಿಸಲು, ನಿಜವಾದ ಮನುಷ್ಯರಾಗಿ ನಾವು ಬಾಳುವುದಕ್ಕೆ ಮಾನವೀಯ ಸಂಬಂಧವನ್ನು ಬೆಳಸಿಕೊಳ್ಳಲು ನಾವು ಅನೇಕ ಪಾಠಗಳನ್ನು ಕಲಿಯಬೇಕಾಗಿದೆ. ಇವುಗಳಲ್ಲಿ ಕೆಲವನ್ನು ಕಥೆ ಮತ್ತು ಘಟನೆಗಳ ಮೂಲಕ ಇಲ್ಲಿ ವ್ಯಕ್ತಪಡಿಸಲಾಗಿದೆ. ಯುವಕರು ತಮ್ಮ ಜೀವನವನ್ನು ರೂಪಿಸಿಕೊಳ್ಳಲು ಇವು ಸಹಾಯಕವಾಗುವುದರಲ್ಲಿ ಸಂದೇಹವಿಲ್ಲ.

## ವ್ಯಕ್ತಿಗೌರವ

ಕಾಲೇಜು ವಿದ್ಯಾರ್ಥಿಯೊಬ್ಬನು ಹೇಳಿದ ಘಟನೆ : ನಾನು ಕಾಲೇಜಿಗೆ ಸೇರಿ ಎರಡು ತಿಂಗಳುಗಳಾಗಿದ್ದವು. ನಮ್ಮ ಪ್ರೊಫೆಸರರು ಒಂದು ರಸಪ್ರಶ್ನೆಯ ಕಾರ್ಯಕ್ರಮವನ್ನು ಏರ್ಪಡಿಸಿದ್ದರು. ನನಗೆ ಪ್ರಶ್ನೆಪತ್ರಿಕೆ ಸಿಕ್ಕಿದ ಕೂಡಲೆ ನಾನು ಎಲ್ಲ ಪ್ರಶ್ನೆಗಳನ್ನು ಒಮ್ಮೆ ಓದಿದೆ. ಕೊನೆಯ ಪ್ರಶ್ನೆ ತುಂಬ ಕುತೂಹಲಕಾರಿಯಾಗಿತ್ತು: "ಕಾಲೇಜನ್ನು ಗುಡಿಸುವ ಮಹಿಳೆಯ ಹೆಸರೇನು?" ಇದು ಹಾಸ್ಯಕ್ಕಾಗಿ ಕೇಳಿದ ಪ್ರಶ್ನೆಯೆಂದು ನಾನು ಭಾವಿಸಿದೆ. ನಾನು ಆ ಮಹಿಳೆ ಗುಡಿಸುವುದನ್ನು ಅನೇಕ ಬಾರಿ ನೋಡಿದ್ದೆ. ಆಕೆ ಎತ್ತರವಾಗಿದ್ದಳು, ಕಪ್ಪು ಕೂದಲು, ಸುಮಾರು ಐವತ್ತು ವರ್ಷ ಇರಬಹುದು. ಅವಳ ಹೆಸರು ನನಗೆ ಹೇಗೆ ಗೊತ್ತಾಗಬೇಕು? ನಾನು ಕೊನೆಯ ಪ್ರಶ್ನೆಯನ್ನು ಉತ್ತರಿಸದೆ ಹಾಗೆಯೇ ಬಿಟ್ಟು ಪತ್ರಿಕೆಯನ್ನು ಹಿಂದಿರುಗಿಸಿದೆ.

ಕ್ಲಾಸು ಕೊನೆಗೊಳ್ಳುವುದಕ್ಕೆ ಮುಂಚೆ ಒಬ್ಬ ವಿದ್ಯಾರ್ಥಿ ಕೇಳಿದ: "ಈ ಪರೀಕ್ಷೆಯಲ್ಲಿ ಕೊನೆಯ ಪ್ರಶ್ನೆಯನ್ನೂ ಪರಿಗಣಿಸಲಾಗುವುದೆ?" "ಖಂಡಿತ" ಪ್ರೊಫೆಸರ್ ಉತ್ತರಿಸಿದರು, "ನಿಮ್ಮ ವೃತ್ತಿಜೀವನದಲ್ಲಿ ನೀವು ಅನೇಕ ವ್ಯಕ್ತಿಗಳನ್ನು ಸಂಧಿಸುತ್ತೀರಿ. ಪ್ರತಿಯೊಬ್ಬರೂ ವಿಶಿಷ್ಟ ವ್ಯಕ್ತಿಗಳೇ. ಎಲ್ಲರೂ ಗೌರವಾರ್ಹರು. ನೀವು

ಕೇವಲ ಮುಗುಳ್ನಕ್ಕು 'ಹಲೋ' ಎಂದರೂ ಎಷ್ಟೋ ಮೇಲು."

ನಾನು ಈ ಪಾಠವನ್ನು ಎಂದೆಂದಿಗೂ ಮರೆಯಲಾರೆ. ಅನಂತರ ಆಕೆಯ ಹೆಸರು ಡೊರಥಿ ಎಂದು ಕೇಳಿ ತಿಳಿದುಕೊಂಡೆ.

### ಪರೋಪಕಾರ

ರಾತ್ರಿ ಗಂಟೆ ೧೧.೩೦ ಅಮೆರಿಕದ ವಯಸ್ಕ ನೀಗ್ರೋ ಮಹಿಳೆಯೊಬ್ಬಳು ಅಲಬಾಮಾ ಹೆದ್ದಾರಿಯ ಪಕ್ಕದಲ್ಲಿ ನಿಂತುಕೊಂಡಿದ್ದಳು. ಧಾರಾಕಾರವಾಗಿ ಮಳೆ ಸುರಿಯುತ್ತಿತ್ತು, ಸಂಪೂರ್ಣ ಒದ್ದೆಯಾಗಿದ್ದಳು. ಆಕೆಯ ಕಾರು ಕೆಟ್ಟು ಹೋಗಿತ್ತು, ಯಾರಾದರೂ ತನ್ನನ್ನು ಕರೆದುಕೊಂಡು ಹೋಗುತ್ತಾರೆಯೆ ಎಂದು ಆತುರದಿಂದ ಬರುವ ಕಾರನ್ನೆಲ್ಲ ನಿಲ್ಲಿಸಲು ಕೈ ಚಾಚುತ್ತಿದ್ದಳು.

ಒಬ್ಬ ಬಿಳಿ ಯುವಕ ಕಾರು ನಿಲ್ಲಿಸಿದ. ೧೯೬೦ರ ದಶಕದಲ್ಲಿ ಇದೊಂದು ಅಪರೂಪದ ಸಂಗತಿಯೇ. ಅವನು ಆಕೆಯನ್ನು ಕಾರಿನಲ್ಲಿ ಊರಿನ ಹತ್ತಿರ ಕರೆದುಕೊಂಡು ಹೋಗಿ, ಒಂದು ಟ್ಯಾಕ್ಸಿಯನ್ನು ಗೊತ್ತುಮಾಡಿ ಅದರಲ್ಲಿ ಕೂರಿಸಿದನು. ಆಕೆ ತುಂಬ ಆತುರದಲ್ಲಿದ್ದಳು, ಆ ಯುವಕನ ವಿಳಾಸವನ್ನು ತೆಗೆದುಕೊಂಡು ಟ್ಯಾಕ್ಸಿಯಲ್ಲಿ ಸರಸರನೆ ಹೊರಟುಬಿಟ್ಟಳು.

ಏಳು ದಿನಗಳ ನಂತರ ಆ ಯುವಕನ ಮನೆಯ ಬಾಗಿಲನ್ನು ಯಾರೊ ತಟ್ಟಿದ ಶಬ್ದವಾಯಿತು. ಅವನು ಬಾಗಿಲು ತೆರೆದಾಗ ಒಂದು ದೊಡ್ಡ ಆಶ್ಚರ್ಯ ಅವನಿಗೆ ಕಾದಿತ್ತು : ಒಂದು ದೊಡ್ಡ ಕಲರ್ ಟಿ.ವಿ.ಯನ್ನು ಅವನಿಗೆ ಯಾರೊ ಕಳಿಸಿದ್ದರು. ಅದರ ಮೇಲೆ ಈ ಕೆಳಗಿನ ಬರಹವಿತ್ತು:

"ಆ ದಿನ ರಾತ್ರಿ ಹೆದ್ದಾರಿಯಲ್ಲಿ ನನಗೆ ಸಹಾಯಮಾಡಿದ್ದಕ್ಕಾಗಿ ತುಂಬ ಧನ್ಯವಾದಗಳು. ಅಂದು ಮಳೆ ನನ್ನ ದೇಹವನ್ನು ಮಾತ್ರವಲ್ಲದೆ ನನ್ನ ಉತ್ಸಾಹವನ್ನು ತೋಯಿಸಿತ್ತು. ಆಗ ನೀವು ಸಹಾಯಕ್ಕೆ ಬಂದಿರಿ. ನಿಮ್ಮಿಂದಾಗಿ ನನ್ನ ಸಾಯುತ್ತಿರುವ ಪತಿಯನ್ನು ಇನ್ನೇನು ಸಾಯುವುದಕ್ಕೆ ಸ್ವಲ್ಪ ಮುಂಚೆ ಸಂಧಿಸಲು ಸಾಧ್ಯವಾಯಿತು. ನನಗೆ ಸಹಾಯ ಮಾಡಿದುದಕ್ಕಾಗಿ, ಇತರರಿಗೆ ನಿಃಸ್ವಾರ್ಥ ಸೇವೆ ಮಾಡಿದುದಕ್ಕಾಗಿ ದೇವರು ನಿಮ್ಮನ್ನು ಆಶೀರ್ವದಿಸಲಿ."

### ಕೃತಜ್ಞತೆ

ಹತ್ತು ವರ್ಷದ ಬಾಲಕನೊಬ್ಬನು ಹೋಟೆಲಿಗೆ ಹೋಗಿ ಒಂದು ಕಡೆ ಕುಳಿತುಕೊಂಡನು. ಸೇವಕಿಯು ಬಂದು ಏನು ಬೇಕು ಎಂದು ವಿಚಾರಿಸಿದಳು. "ಒಂದು ಸ್ಪೆಷಲ್ ಐಸ್‌ಕ್ರೀಂ ಕಪ್ಪಿಗೆ ಎಷ್ಟು?" ಎಂದು ಹುಡುಗ ಕೇಳಿದ. "ಐವತ್ತು ಸೆಂಟುಗಳು" ಎಂದಳು ಆಕೆ.

ಹುಡುಗನು ನನ್ನ ಜೇಬಿನಿಂದ ನಾಣ್ಯಗಳನ್ನು ತೆಗೆದು ಎಣಿಸತೊಡಗಿದ. "ಸಾಮಾನ್ಯ ಐಸ್‌ಕ್ರೀಂಗೆ ಎಷ್ಟು?" ಬಾಲಕ ಪ್ರಶ್ನಿಸಿದ. ಅಷ್ಟು ಹೊತ್ತಿಗಾಗಲೇ ಬೇರೆ ಗಿರಾಕಿಗಳು ಬರತೊಡಗಿದರು, ಸೇವಕಿಯ ತಾಳ್ಮೆ ಬತ್ತಿಹೋಗತೊಡಗಿತು. "ಮೂವತ್ತೈದು ಸೆಂಟ್‌ಗಳು" ಎಂದು ಆಕೆ ಒರಟಾಗಿ ಹೇಳಿದಳು. ಹುಡುಗನು ಮತ್ತೆ ನಾಣ್ಯಗಳನ್ನು ಎಣಿಸತೊಡಗಿದ. "ನನಗೆ ಸಾಮಾನ್ಯ ಐಸ್ ಕ್ರೀಮನ್ನೇ ಕೊಡಿ," ಎಂದನಾತ.

ಸೇವಕಿಯು ಐಸ್‌ಕ್ರೀಮನ್ನು ತಂದುಕೊಟ್ಟು, ಬಿಲ್ಲನ್ನು ಮೇಜಿನ ಮೇಲಿರಿಸಿ ಗಂಟುಮುಖ ಹಾಕಿಕೊಂಡೇ ಹೊರಟು ಹೋದಳು. ಬಾಲಕನು ಐಸ್‌ಕ್ರೀಂ ತಿಂದು ಮುಗಿಸಿದ. ಕ್ಯಾಶಿಯರ್‌ಗೆ ಹಣ ಕೊಟ್ಟು ಹೊರಟುಹೋದ.

ಸೇವಕಿಯು ಹಿಂತಿರುಗಿ ಬಂದು ಮೇಜನ್ನು ಸ್ವಚ್ಛಗೊಳಿಸ ತೊಡಗಿದಳು. ತಟ್ಟೆಯ ಕೆಳಗೆ ಕೆಲವು ನಾಣ್ಯಗಳಿದ್ದವು. ಅದನ್ನು ನೋಡಿ ಆಕೆ ಕಣ್ಣೀರು ಸುರಿಸತೊಡಗಿದಳು. ಆಗ ಅವಳಿಗೆ ತಿಳಿಯಿತು. ಆ ಹುಡುಗ ಸ್ಪೆಷಲ್ ಐಸ್‌ಕ್ರೀಂ ತೆಗೆದುಕೊಳ್ಳದೆ ಇದ್ದುದು ಅದಕ್ಕೂ ಕೊಟ್ಟು ಸೇವಕಿಗೆ ಟಿಪ್ ಕೊಡುವಷ್ಟು ಹಣ ಆತನಲ್ಲಿ ಇಲ್ಲದೆ ಇದ್ದುದರಿಂದ.

### ಅಡೆತಡೆಗಳ ಲಾಭ

ಪುರಾತನ ಕಾಲದ ಒಬ್ಬ ರಾಜನು ಒಂದು ದೊಡ್ಡ ಕಲ್ಲನ್ನು ರಸ್ತೆಯ ಮಧ್ಯೆ ಇಟ್ಟು, ಪಕ್ಕದಲ್ಲಿಯೇ ಅವಿತುಕೊಂಡಿದ್ದನು. ಯಾರಾದರೂ ದಾರಿಹೋಕರು ಆ ಕಲ್ಲನ್ನು ತೆಗೆಯುತ್ತಾರೆಯೇ ಎಂದು ನಿರೀಕ್ಷಿಸುತ್ತಿದ್ದನು.

ಕೆಲವು ಶ್ರೀಮಂತ ವರ್ತಕರು ಮತ್ತು ರಾಜನ ಆಸ್ಥಾನಿಕರು ಅದೇ ರಸ್ತೆಯ ಮೂಲಕ ಹಾದುಹೋದರು. ಆದರೆ ಕಲ್ಲಿನ ಕಡೆ ಗಮನವನ್ನೇ ಹರಿಸಲಿಲ್ಲ. ಅನೇಕರು ರಸ್ತೆಯನ್ನು ಸರಿಯಾಗಿ ನೋಡಿಕೊಳ್ಳದೆ ಇರುವುದಕ್ಕಾಗಿ ರಾಜನನ್ನು ತುಂಬ ನಿಂದಿಸಿದರು. ಆದರೆ ಯಾರೂ ಕಲ್ಲನ್ನು ತೆಗೆದುಹಾಕುವ ಗೋಜಿಗೆ ಹೋಗಲಿಲ್ಲ.

ಅನಂತರ ಒಬ್ಬ ರೈತನು ತರಕಾರಿ ಹೊತ್ತುಕೊಂಡು ಆ ಮಾರ್ಗವಾಗಿ ಬಂದನು. ಅವನು ರಸ್ತೆಯ ಮಧ್ಯೆ ದೊಡ್ಡ ಕಲ್ಲು ಇರುವುದನ್ನು ಗಮನಿಸಿ ಅದನ್ನು ಪಕ್ಕಕ್ಕೆ ಸರಿಸಬೇಕೆಂದು ತೀರ್ಮಾನಿಸಿದನು. ಅವನು ತರಕಾರಿ ಬುಟ್ಟಿಯನ್ನು ಕೆಳಗಿಳಿಸಿ, ಕಲ್ಲನ್ನು ತಳ್ಳತೊಡಗಿದ. ತುಂಬ ಶ್ರಮಪಟ್ಟು ಕಲ್ಲನ್ನು ರಸ್ತೆಯ ಪಕ್ಕಕ್ಕೆ ಸರಿಸಿದ.

ಈಗ ತರಕಾರಿ ಬುಟ್ಟಿಯನ್ನು ಹೊತ್ತುಕೊಂಡು ಹೊರಡಬೇಕೆಂದಿರುವಾಗ ಅವನಿಗೆ ಆ ಕಲ್ಲು ಇದ್ದ ಜಾಗದಲ್ಲಿ ಒಂದು ಪರ್ಸ್ ಇರುವುದು ಕಾಣಿಸಿತು. ಅವನು ಅದನ್ನು ತೆರೆದು ನೋಡಿದ. ಅದರಲ್ಲಿ ಕೆಲವು ಚಿನ್ನದ ನಾಣ್ಯಗಳು ಮತ್ತು ಒಂದು ಚೀಟಿ ಇತ್ತು. ಆ ಚೀಟಿಯನ್ನು ಬಿಡಿಸಿ ನೋಡಿದಾಗ ಅದರಲ್ಲಿ ರಾಜನು ಹೀಗೆ ಬರೆದಿದ್ದನು : ಯಾರು ಈ ಕಲ್ಲನ್ನು ರಸ್ತೆಯ ಬದಿಗೆ ಸರಿಸುತ್ತಾರೊ ಅವರಿಗೆ ಈ ಚಿನ್ನದ ನಾಣ್ಯ ಸಲ್ಲಬೇಕು. ರೈತನು ಇದರಿಂದ ಅನೇಕರು ಅರ್ಥಮಾಡಿಕೊಳ್ಳದ ಒಂದು ಪಾಠವನ್ನು

ಕಲಿತನು : ಪ್ರತಿಯೊಂದು ಬಾಧಕವೂ ನಮ್ಮ ಪ್ರಗತಿಗೆ ಒಂದು ಸಾಧಕವಾಗುತ್ತದೆ.

### ತ್ಯಾಗಮನೋಭಾವ

ಚಿಕ್ಕ ಹುಡುಗಿ ಲಿಜ್ ಎಂಬುವವಳು ತುಂಬ ಗಂಭೀರವಾದ ಕಾಯಿಲೆಯಿಂದ ನರಳುತ್ತಿದ್ದಳು. ಅವಳು ಬದುಕಬಹುದಾದ ಒಂದೇ ಆಸೆಯೆಂದರೆ ಅವಳ ಐದು ವರ್ಷದ ಸಹೋದರನ ರಕ್ತವನ್ನು ಅವಳಿಗೆ ನೀಡುವುದು. ಏಕೆಂದರೆ ಆ ಹುಡುಗ ಅದೇ ಕಾಯಿಲೆಯಿಂದ ಹಿಂದೆ ನರಳುತ್ತಿದ್ದು ಈಗ ಪವಾಡಸದೃಶವಾಗಿ ಅದರಿಂದ ಮುಕ್ತನಾಗಿದ್ದುದರಿಂದ ಅವನ ರಕ್ತದಲ್ಲಿ ಆ ಕಾಯಿಲೆಗೆ ಸಂಬಂಧಿಸಿದ ಆ್ಯಂಟಿ ಬಾಡಿಗಳಿದ್ದವು.

ವೈದ್ಯರು ಹುಡುಗನಿಗೆ ಪರಿಸ್ಥಿತಿಯನ್ನು ವಿವರಿಸಿ, "ಸಹೋದರಿಗಾಗಿ ನೀನು ರಕ್ತವನ್ನು ಕೊಡುತ್ತೀಯಾ?" ಎಂದು ಕೇಳಿದರು. ಬಾಲಕ ಸ್ವಲ್ಪ ಹಿಂಜರಿದು, ಕೊನೆಗೆ ದೀರ್ಘ ಉಸಿರುಬಿಟ್ಟು "ಆಗಲಿ, ಅವಳು ಅದರಿಂದ ಬದುಕುವುದಾದರೆ ಕೊಡುತ್ತೇನೆ," ಎಂದನು.

ಈಗ ಸಹೋದರ ಸಹೋದರಿಯರು ಅಕ್ಕಪಕ್ಕದಲ್ಲಿ ಹಾಸಿಗೆಯ ಮೇಲೆ ಮಲಗಿಕೊಂಡಿದ್ದಾರೆ. ಒಂದು ದೇಹದಿಂದ ಮತ್ತೊಂದು ದೇಹಕ್ಕೆ ರಕ್ತಪೂರಣ ನಡೆಯುತ್ತಿದೆ. ಹುಡುಗನು ತಂಗಿಯ ಕಡೆ ನೋಡಿದ. ಅವಳು ಕ್ರಮೇಣ ಚೇತರಿಸಿಕೊಂಡು ಆಕೆಯ ಮುಖದ ಬಣ್ಣ ಬದಲಾಗತೊಡಗಿತು. ಅವನು ಒಮ್ಮೆ ಮುಗುಳ್ನಕ್ಕು ವೈದ್ಯರ ಕಡೆ ತಿರುಗಿದ. ಈಗ ಅವನ ಮುಖ ಬಿಳಿಚಿಕೊಂಡಿತು, ನಗು ಹೊರಟುಹೋಯಿತು. ಅವನು ನಡುಗುವ ಧ್ವನಿಯಲ್ಲಿ ವೈದ್ಯರನ್ನು ಕೇಳಿದ: "ಈಗ ನಾನು ಸತ್ತುಹೋಗುತ್ತೇನೆ ಅಲ್ಲವೆ?"

ಈ ಪ್ರಶ್ನೆಯನ್ನು ಕೇಳಿ ವೈದ್ಯರಿಗೆ ಆಶ್ಚರ್ಯವಾಯಿತು. ಆ ಬಾಲಕ ಭಾವಿಸಿದ್ದ ತನ್ನ ಸೋದರಿಗಾಗಿ ತನ್ನ ದೇಹದ ಪೂರ್ಣ ರಕ್ತ ಕೊಡಬೇಕಾಗುತ್ತದೆ ಎಂದು. ಇದರಿಂದ ತಾನು ಸಾಯುತ್ತೇನೆ ಎಂದು ತಿಳಿದಿದ್ದರೂ ಅವನು ರಕ್ತ ಕೊಡಲು ಸಮ್ಮತಿಸಿದ್ದ.

# ಪ್ರಹಸನ ಪ್ರಸಂಗ

ಮುಲ್ಲ ನಜರುದ್ದಿನನ ಪತ್ನಿ ತೀವ್ರ ಕಾಯಿಲೆಯಿಂದ ನರಳುತ್ತಿದ್ದಳು. ವೈದ್ಯರ ಎಲ್ಲ ಚಿಕಿತ್ಸೆಯೂ ವಿಫಲವಾಯಿತು. ಅವಳ ಸಾವು ನಿಶ್ಚಯವಾಗಿತ್ತು. ತನ್ನ ಪತಿಯನ್ನು ಹತ್ತಿರ ಕರೆದು ಅವಳು ಹೇಳಿದಳು :

"ಸ್ವಾಮಿ, ನಾನಿನ್ನು ಬದುಕುವುದಿಲ್ಲ. ನಾನು ನಿಮ್ಮನ್ನು ಒಂದು ಪ್ರಶ್ನೆ ಕೇಳಲೆ?"

"ಖಂಡಿತ ಕೇಳು, ಪ್ರಿಯೆ."

"ನನ್ನ ಸಾವಿನ ನಂತರ ನೀವೇನಾಗುತ್ತೀರಿ?" ಪತ್ನಿ ಕೇಳಿದಳು.

"ನನಗೆ ಖಂಡಿತ ಹುಚ್ಚೇ ಹಿಡಿಯುತ್ತದೆ," ಮುಲ್ಲ ತನ್ನ ತೋರಿಕೆಯ ದುಃಖವನ್ನು ವ್ಯಕ್ತಪಡಿಸಿದ.

"ಏನಿಲ್ಲ, ನನಗೆ ಗೊತ್ತು, ನೀವು ಇನ್ನೊಬ್ಬಳನ್ನು ಮದುವೆಯಾಗುತ್ತೀರಿ ಅಷ್ಟೆ," ಎಂದು ಪತ್ನಿ ಆತಂಕದಿಂದ ನುಡಿದಳು.

"ನಾನು ಹುಚ್ಚನಾಗುವುದು ನಿಜ, ಆದರೆ ಅಷ್ಟೊಂದು ಹುಚ್ಚನಾಗುವುದಿಲ್ಲ!" ಮುಲ್ಲ ಹೇಳಿದ

✿ ✿ ✿ ✿ ✿ ✿

ಒಂದು ಕಾಲದಲ್ಲಿ ಒಂದು ಚಿಕ್ಕ ಅರಣ್ಯದಲ್ಲಿ ಒಂದು ಅನಾಥ ಮೊಲ ಮತ್ತು ಒಂದು ಅನಾಥ ಹಾವು ವಾಸಿಸುತ್ತಿದ್ದವು. ವಿಚಿತ್ರವೇನೆಂದರೆ ಅವೆರಡೂ ಹುಟ್ಟು ಕುರುಡಾಗಿದ್ದವು. ಒಂದು ದಿನ ಮೊಲವು ಕುಪ್ಪಳಿಸುತ್ತ ಹೋಗುತ್ತಿರುವಾಗ ಕುರುಡು ಹಾವನ್ನು ಎಡವಿ ಮುಗ್ಗರಿಸಿ ಬಿತ್ತು. ಹಾವಿಗೂ ಪೆಟ್ಟಾಯಿತು.

ಮೊಲ ಹೇಳಿತು : "ಓಹ್, ತುಂಬ ತಪ್ಪು ಮಾಡಿದೆ. ಉದ್ದೇಶಪೂರ್ವಕವಾಗಿ ನಿನ್ನನ್ನು ನೋಯಿಸಲಿಲ್ಲ. ನಾನು ಹುಟ್ಟುಕುರುಡ. ನನಗೆ ದಾರಿ ಕಾಣಿಸುವುದಿಲ್ಲ. ಅಷ್ಟೇ ಅಲ್ಲದೆ ನಾನು ಅನಾಥನಾಗಿರುವುದರಿಂದ ನಾನೇನಾಗಿರುವೆನೆಂಬುದೇ ನನಗೆ ಗೊತ್ತಿಲ್ಲ."

ಹಾವು ಹೇಳಿತು : "ಪರವಾಯಿಲ್ಲ. ನಿಜವಾಗಿಯೂ ನನ್ನ ಪರಿಸ್ಥಿತಿಯೂ ಅಂಥದೇ. ನಾನೂ ಹುಟ್ಟುಕುರುಡ ಮತ್ತು ನನ್ನ ತಾಯಿಯ ಪರಿಚಯವೇ ಇಲ್ಲ. ನಾನು ಬೇಕಾದರೆ ನಿನ್ನ ದೇಹದ ಮೇಲೆ ಹರಿದಾಡಿ ನೀನು ಯಾರು ಎಂದು ಪತ್ತೆ ಹಚ್ಚಬಲ್ಲೆ. ಆಗಬಹುದೇ?"

"ಬಹಳ ಒಳ್ಳೆಯದು" ಎಂದು ಮೊಲ ಹೇಳಿತು. ಹಾವು ಮೊಲದ ದೇಹದ ಮೇಲೆ ಮೆತ್ತಗೆ ಹರಿದಾಡಿ, ಕೊನೆಗೆ ಹೇಳಿತು: "ನೋಡು, ನಿನ್ನ ದೇಹ ಮೃದು ತುಪ್ಪುಳುವಿನಿಂದ ಆವೃತವಾಗಿದೆ. ನಿನಗೆ ಉದ್ದನೆಯ ಕಿವಿಗಳಿವೆ. ನಿನ್ನ ಮೂಗು ಅದುರುತ್ತದೆ. ನಿನಗೆ ಮೃದು ಹತ್ತಿಯಂತಹ ಬಾಲವಿದೆ. ನನಗನಿಸುವಂತೆ ನೀನು ಮೊಲವಾಗಿರಬೇಕು."

ಮೊಲ ಆನಂದದಿಂದ ಕುಪ್ಪಳಿಸಿ ಹೇಳಿತು: "ಓಹ್,ತುಂಬ ಧನ್ಯವಾದಗಳು. ನಾನೂ ಕೂಡ ನಿನ್ನ ದೇಹದ ಮೇಲೆ ನನ್ನ ಪಾದವನ್ನು ಓಡಾಡಿಸಿ ನೀನು ಯಾರೆಂದು ಗುರುತಿಸುತ್ತೇನೆ."

ಹಾವಿನ ಇಡಿ ದೇಹವನ್ನು ಸ್ಪರ್ಶಿಸಿ ಮೊಲ ಹೇಳಿತು: "ನಿನ್ನ ದೇಹ ಮೃದುವಾಗಿದೆ. ನಿನಗೆ ಚೂಪಾದ ನಾಲಗೆ. ನಿನಗೆ ಬೆನ್ನುಮೂಳೆಯೇ ಇಲ್ಲ. ಆದ್ದರಿಂದ ನನಗನಿಸುತ್ತೆ, ನೀನು ರಾಜಕಾರಣಿಯಾಗಿರಬೇಕು, ಇಲ್ಲವೆ ಅಟಾರ್ನಿಯಾಗಿರಬೇಕು ಅಥವಾ ಯಾವನೊ ಉನ್ನತ ಕಾರ್ಯನಿರ್ವಾಹಕನಾಗಿರಬೇಕು."